ಶ್ರೀ ಸಿದ್ದರಾಮಯ್ಯ :- ನಮಗೆ ಬಿಕ್ಕಟ್ಟೂ ಇಲ್ಲ, ನಮ್ಮ ಸರಕಾರವು ಬಹಳ ಸದೃಢವಾಗಿ ಇದೆ. ನೀವ್ಯಾರೂ ಚಿಂತೆ ಮಾಡಬೇಕಾದ ಅಗತ್ಯವಿಲ್ಲ. ಬೇರೆಯವರ ಸಹಾಯ ತೆಗೆದುಕೊಂಡು ಸರಕಾರ ಮಾಡುವ ಪರಿಸ್ಥಿತಿಯು ನಮಗೆ ನಿರ್ಮಾಣ ಮಾಗುವುದಿಲ್ಲ.

ಶ್ರೀ ಮಾಟಾಳ್ ನಾಗರಾಜ್ :- ನಿಮಗೆ ಶಿವರಾಮೇಗೌಡರಂಥವರು ನಾಲ್ಕು ಐದು ಜನ ಸಹಾಯ ಮಾಡಿದ್ದಾರೆ. ನಿಮ್ಮ ಸರಕಾರ ಇರಬೇಕೆಂದು ಹೇಳುವ ಮನುಷ್ಯ ನಾನು. ನಾನು ಹಿಂದೆ ಬಹಿರಂಗ ಸಭೆಯಲ್ಲಿ ಹೇಳಿದ್ದೇನೆ. ನನ್ನ ಒಂದು ಓಟಿನಿಂದ ಪಟೇಲರ ಸರಕಾರ ಬಿದ್ದುಹೋಗುತ್ತದೆ ಅಂದರೆ ನಾನು ಓಟು ಕೊಡುತ್ತೇನೆಂದು ಹೇಳಿದ್ದೇನೆ. ಈಗ ಪತ್ರಿಕೆಗಳಲ್ಲಿನ ಪ್ರಚಾರ ವೈಖರಿಯನ್ನು ನೋಡುತ್ತಾ ಇದ್ದು ತಮ್ಮಲ್ಲಿ ಬಹಳ ಜನರು ಭಯಬಿದ್ದುಬಿಟ್ಟಿದ್ದೀರಿ. ನನ್ನ ಪ್ರಶ್ನೆ ಬೇರೆ. ನಿಮ್ಮಲ್ಲಿ ಬಹುತೇಕ ಜನ ಅವರ ಚಿತ್ರ ಹಾಕಿಕೊಂಡು ಅವರನ್ನು ಭಾಷಣಕ್ಕೆ ಕರೆದು ಅವರ ಕಡೆಯಿಂದ ಗೆದ್ದಿದ್ದೀರಲ್ಲಾ; ನಾನು ಏಕೆ ಈ ಮಾತು ಹೇಳುತ್ತಿದ್ದೇನೆಂದರೆ ಪ್ರಚಾರಯುಗದಲ್ಲಿ ಪ್ರಚಾರದಿಂದ ಭಯೋತ್ಪಾದನೆ ಆಗುವುದೆಂಬ ಮಾತಿದೆ. ನೀವ್ಯಾರೂ ಅದಕ್ಕೆ ತಯಾರಾಗಿಲ್ಲ. ಆದ್ದರಿಂದ ನಾನೇನೂ ಮಾಡುವುದಕ್ಕಾಗುವುದಿಲ್ಲ; ನಾವು ಧೈರ್ಯವಾಗಿದ್ದೇವೆ; ಅಂದರೆ ಸಂತೋಷ, ನಿಮಗೆ ಒಳ್ಳೆಯದಾಗಲಿ. ಕೊನೆಯದಾಗಿ ಸಾರ್ ಒಂದು ಮಾತು ನಾನು ಹೇಳಬಯಸುತ್ತೇನೆ. ಇದು ಸಂಬಂಧವಿಲ್ಲದ್ದು. ಕೇಂದ್ರದ ವಾರ್ತಾಸಚಿವರು "ವರದಿ ಸಾಬೀತು ಪತ್ರಕರ್ತನ ಹೊಣೆ" ಎಂದು ಹೇಳಿರುವುದು ನಿನ್ನೆ ಪತ್ರಿಕೆಗಳಲ್ಲಿ ಬಂದಿದೆ. ಅದರಲ್ಲಿ ಪ್ರಾಮಾಣಿಕ ಚಿಂತನೆ ಆಗಬೇಕೇ ಹೊರತು ಪತ್ರಕರ್ತ ವರದಿ ಕೊಡಬೇಕಾದರೆ ಜವಾಬ್ದಾರಿಯಿಂದಲೇ ವರದಿ ಸ್ಪಷ್ಟಮಾಡುತ್ತಾರೆ. ಆದರೆ ಮಾನನಷ್ಟ ಮೊಕದ್ದಮೆ ಎಂಬುದಕ್ಕೆ ಇನ್ನೂ ತಿದ್ದುಪಡಿ ತರಬೇಕು. ಹೆಚ್ಚಿನ ಒತ್ತು ಅದಕ್ಕೆ ಕೊಡಬೇಕು ಎಂಬುದು ಮತ್ತು ಮಾನನಷ್ಟ ಮೊಕದ್ದಮೆ ಸಾಬೀತಾದಲ್ಲಿ ಆತನಿಗೆ ಶಿಕ್ಷೆ ಕೊಡಬೇಕೆಂಬುದು ನಿಜ, ಬರವಣಿಗೆಗಳ ಬಗ್ಗೆ ಚರ್ಚೆಯಾಗಬೇಕು. ಯಾವರೀತಿ ವರದಿ ಇರಬೇಕು ಎಂದು. ಆದರೆ ದೆಹಲಿಯಲ್ಲಿ ಪ್ರೆಸ್ ಕೌನ್ಸಿಲ್ ಎಂದು ಇದೆ, ಅದಕ್ಕೆ ಸುಪ್ರೀಂಕೋರ್ಟಿನ ನಿವೃತ್ತ ನ್ಯಾಯಾಧೀಶರು ಅಧ್ಯಕ್ಷರಾಗಿದ್ದಾರೆ. ಅಲ್ಲಿ ವಿಶೇಷವಾಗಿ ನಾವು ವರದಿ ಸಲ್ಲಿಸಲು ಅವಕಾಶ ಇದೆ. ಆದ್ದರಿಂದ ಇದು ಸರಿಯಾದ ಮಾರ್ಗ ವಲ್ಲವೆಂಬುದು ನನ್ನ ಅನಿಸಿಕೆ. ಒಂದು ರೀತಿ ಸರ್ವಾಧಿಕಾರಿ ಮನೋಭಾವನೆಗೆ ಇದು ಹೋಗುವಂಥದ್ದು, ಇಂತಹ ತಿದ್ದುಪಡಿಗಳನ್ನು ಲೋಕಸಭೆಯಾಗಲಿ ಯಾರೇ ಆಗಲಿ ತರಬಾರದೆಂಬ ಮಾತು ಹೇಳುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

(5) ವರದಿಯನ್ನು ಒಪ್ಪಿಸುವುದು.

ಶ್ರೀ ಜಿ. ಬಿ. ಶಿವಕುಮಾರ್ (ಕೆರೆಗೋಡು) :- ಅಧ್ಯಕ್ಷರೇ, ರಾಜ್ಯದಲ್ಲಿ ವಿದ್ಯುಚ್ಛಕ್ತಿ ದರವನ್ನು ಪುನರ್ ವಿಮರ್ಶಿಸುವ ಬಗ್ಗೆ ಪರಿಶೀಲಿಸಿ ವರದಿ ನೀಡಲು ರಚಿಸಲಾಗಿರುವ ಜಂಟಿ ಸಲಹಾ ಸಮಿತಿಯ ಅಧ್ಯಕ್ಷನಾದ ನಾನು ಅದರ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು :- ವರದಿಯನ್ನು ಒಪ್ಪಿಸಲಾಗಿದೆ.

6) ವಿತ್ತೀಯ ಕಾರ್ಯ ಕಲಾಪ.

1996-97 ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ.

+ **ಶ್ರೀ ಪಿ. ಎಸ್. ಜಯವಂತ್ (ಸಿರಸಿ) :-** ಅಧ್ಯಕ್ಷರೇ, 1996-97 ನೇ ಸಾಲಿನ ಬೇಡಿಕೆ ಮೇಲೆ ಚರ್ಚೆಯಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮ್ಮನ್ನು ಅಭಿನಂದಿಸುತ್ತಾ

(ಶ್ರೀ ಚಂದ್ರಕಾಂತ ಜಿ. ಬೆಲ್ಲದ್‌ರವರು ಪೀಠವನ್ನಲಂಕರಿಸಿದರು)

19 ಬೇಡಿಕೆಗಳಲ್ಲಿ ಕೆಲವು ಬೇಡಿಕೆ ಬಗ್ಗೆ ನ್ಯೂನತೆಗಳ ಕುರಿತು ಕೆಲವು ಸಲಹೆ ಕೊಡುವುದಕ್ಕೆ ನಾನು ಇಷ್ಟಪಡುತ್ತೇನೆ. ಪ್ರಥಮವಾಗಿ ನಗರಾಭಿವೃದ್ಧಿ ಇಲಾಖೆಯ ಬೇಡಿಕೆ ಬಗ್ಗೆ. . ಇವತ್ತಿನ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯದ ಬಹುತೇಕ ನಗರಸಭೆ ಪುರಸಭೆಗಳ ಆರ್ಥಿಕ ಪರಿಸ್ಥಿತಿ ಬಹಳಷ್ಟು ಚಿಂತಾಜನಕವಿದ್ದು ಅವು ತಮ್ಮ ಸಿಬ್ಬಂದಿ ವೇತನ ಬಟವಾಡೆ ಮಾಡದಿರುವಂತಹ ಪರಿಸ್ಥಿತಿ ಇದೆ. ಸಾಮಾನ್ಯವಾಗಿ ನಗರಸಭೆ ಪುರಸಭೆಗಳಲ್ಲಿ ಪ್ರತಿಶತ 60 ಜನ ವಾಸಿಸುತ್ತಿದ್ದು ಅವರ ಪ್ರಾಥಮಿಕ ಸೌಲಭ್ಯಗಳನ್ನು ನಗರಸಭೆ ಪುರಸಭೆಗಳು ಪೂರೈಸಬೇಕಾಗುತ್ತದೆ. ಇವತ್ತಿನ ವಾತಾವರಣ ನೋಡಿದಾಗ ಪ್ರಾಥಮಿಕ ಸೌಲಭ್ಯ ಪೂರೈಸಲಾರದ ಪರಿಸ್ಥಿತಿ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಅಧ್ಯಕ್ಷರ ಮೂಲಕ ನಾನು ಸಚಿವರಲ್ಲಿ ವಿನಂತಿಸುತ್ತೇನೆ. ತಾವು ಇದರ ಬಗ್ಗೆ ಚಿಂತನೆ ಮಾಡಿ ಹೆಚ್ಚಿನ ಸವಲತ್ತುಗಳನ್ನು ಸಾರ್ವಜನಿಕರಿಗೆ ಒದಗಿಸುವಲ್ಲಿ ಕಟಿಬದ್ಧರಾಗಬೇಕಾಗಿದೆ. ನಗರ ಸಭೆ ಪುರಸಭೆಗಳ ಬಹುತೇಕ ಕುಡಿಯುವ ನೀರಿನ ಅಥವಾ ಒಳಚರಂಡಿ ಯೋಜನೆ ಗಳಿರಲಿ ಇವನ್ನೆಲ್ಲಾ ಕೆಯುಡಬ್ಲ್ಯುಎಸ್ ಇಲಾಖೆ ಮಾಡುತ್ತದೆ. ಆದರೆ ಕೆಯುಡಬ್ಲ್ಯುಎಸ್ ನಗರಸಭೆಪುರಸಭೆಗಳ ಮತ್ತು ನಗರಾಭಿವೃದ್ಧಿ ಇಲಾಖೆಗಳವರಲ್ಲಿ ಹೊಂದಾಣಿಕೆ ಇಲ್ಲದಿರುವುದರಿಂದ ಸರಿಯಾದ ವೇಳೆಗೆ ಯಾವುದೇ ಕೆಲಸಗಳಾಗದೆ ನಗರಕ್ಕೆ ಬಹಳ ತೊಂದರೆಯಾಗುತ್ತಿದೆ. ಉದಾಹರಣೆಗೆ ನನ್ನ ಕ್ಷೇತ್ರ ಸಿರಸಿಯಲ್ಲಿ 1986 ರಲ್ಲಿ 2 ನೇ ಹಂತದ ನೀರಿನ ಯೋಜನೆ ಪ್ರಾರಂಭವಾಯಿತು. ಆದು 60 ಲಕ್ಷದ ಯೋಜನೆ. ಇವತ್ತು ಒಂದು ಕೋಟಿ ಕೊಟ್ಟಿದ್ದರೂ ಆ ಕೆಲಸ ಪೂರ್ತಿ ಮಾಡಲಿಕ್ಕೆ ಆಗಲಿಲ್ಲ. ಮೊನ್ನೆ ಅಧಿಕಾರಿಗಳು ಹೇಳಿದರು ಮಾರ್ಚ 31ಕ್ಕೆ ಮುಕ್ತಾಯ ಮಾಡಿಕೊಡುತ್ತೇವೆಂದು. ಆದರೂ ಆಗಲಿಲ್ಲ. ನಾನು ಪ್ರಶ್ನೆ ಕೇಳಿದರೂ ಅಧಿಕಾರಿಗಳು ನಿರ್ಲಕ್ಷ್ಯದಿಂದ ಬೇಜವಾಬ್ದಾರಿ ಉತ್ತರ ಕೊಟ್ಟು ನಮ್ಮನ್ನು ತಪ್ಪುದಾರಿಗೆಳೆಯುತ್ತಾರೆ. ನಮ್ಮ ಕ್ಷೇತ್ರದಲ್ಲಿ ಒಳಚರಂಡಿ ಯೋಜನೆ ಪ್ರಾರಂಭವಾಗಿ 29 ವರ್ಷವಾದರೂ ಇನ್ನೂ ಕಾರ್ಯಾರಂಭಗೊಳ್ಳಲಿಲ್ಲ. ಇದು ದುರದೃಷ್ಟ. 37ಲಕ್ಷದ ಯೋಜನೆ ಪೂರ್ತಿಯಾಗದೆ ಇಡೀ ನಗರದ ಜನತೆ ಕಷ್ಟದಲ್ಲಿದ್ದಾರೆ. ಸ್ವಚ್ಛತೆ ಅಸ್ತವ್ಯಸ್ತವಾಗಿದೆ. ಆ ಯೋಜನೆ ಪೂರ್ಣಗೊಳ್ಳದೆ ನಗರಸಭೆಯಿಂದ 28 ಲಕ್ಷ ಆಗಲೇ ಮುರಿದುಕೊಂಡಿದ್ದಾರೆ. ಇಂತಹ ಅವ್ಯವಸ್ಥೆ ಅಸಮರ್ಪಕ ಆಡಳಿತವಾದರೆ ಜನತೆಗೆ ಬಹಳ ಕಷ್ಟವಾಗುತ್ತದೆ. ಈ ದಿಸೆಯಲ್ಲಿ ತಾವು ಚಿಂತನೆ ಮಾಡಬೇಕು. ಅಧ್ಯಕ್ಷರೇ,